# ವೈವಾಸ್‌ನಿಂದ ಮನೆ ಮನೆಗೆ ತೆರಳಿ ಹೃದ್ರೋಗಿಗಳಿಗೆ ಚಿಕಿತ್ಸೆ

ಮಂಡ್ಯ, ಮೇ ೧೬ (ಎನ್ಕೆಪಿ)- ವೈವಾಸ್ ಗ್ರೂಪ್‌ನಿಂದ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಮನೆ ಮನೆಗೆ ತೆರಳಿ ಹೃದ್ರೋಗಿಗಳಿಗೆ ಚಿಕಿತ್ಸೆ ನೀಡುವ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗ್ರೂಪ್ಸ್‌ನ ಮುಖ್ಯಸ್ಥ ಡಾ. ಶ್ರೀನಿವಾಸ್ ಮತ್ತು ಡಾ. ರಮೇಶ್ ತಿಳಿಸಿದರು.

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜದಲ್ಲಿ ಎಲ್ಲ ವರ್ಗದ ಜನತೆಗೆ ಹೃದಯ ಶುಶ್ರೂಷೆ ತಲುಪಿಸುವ ಉದ್ದೇಶದಿಂದ ಮೊಬೈಲ್ ಕ್ಯಾತ್‌ಲ್ಯಾಬ್ ವ್ಯವಸ್ಥೆ ಮಾಡಲಾಗಿದೆ. ಮಂಡ್ಯ, ಹಾಸನ, ತುಮಕೂರು, ಕುಣಿಗಲ್ ಮತ್ತು ಕೋಲಾರ ವ್ಯಾಪ್ತಿ ಸಂಚರಿಸಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುವುದು ಎಂದರು.

ಇತ್ತೀಚಿನ ದಿನಗಳಲ್ಲಿ ಭಾರತದಾದ್ಯಂತ ಹೃದ್ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ನಗರ ಪ್ರದೇಶದಲ್ಲಿ ಶೇ. ೧೦ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ. ೫ರಷ್ಟು ಜನರು ಹೃದ್ರೋಗದಿಂದ ನರಳುತ್ತಿದ್ದಾರೆ. ಆದರೆ ಬಹುತೇಕ ಆರೋಗ್ಯ ಸೇವಾ ಕೇಂದ್ರಗಳು ನಗರ ಪ್ರದೇಶಕ್ಕಷ್ಟೇ ಕೇಂದ್ರೀಕೃತಗೊಂಡಿವೆ. ಏಳು ದಶಲಕ್ಷ ಜನ ವಾಸಿಸುವ ಬೆಂಗಳೂರಿನಲ್ಲಿ ಹತ್ತು ಕೇಂದ್ರಗಳಿವೆ. ಮಂಡ್ಯ, ಹಾಸನ, ಕೋಲಾರ, ತುಮಕೂರಿನಲ್ಲಿ ಹೃದ್ರೋಗ ಕೇಂದ್ರಗಳೇ ಇಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಆಧುನಿಕ ತಂತ್ರಜ್ಞಾನ, ವೈದ್ಯರ ಸಹಾಯದಿಂದ ನಿಯಮಿತ ರಸ್ತೆಗಳಲ್ಲೇ ಮೊಬೈಲ್ ಕ್ಯಾತ್ ಲ್ಯಾಬ್ ರಾಜ್ಯದ ಯಾವುದೇ ಮೂಲೆಯನ್ನು ತಲುಪಲು ಸಾಧ್ಯವಾಗುತ್ತದೆ. ರೋಗಿಗಳ ಮನೆ ಬಾಗಿಲಿಗೆ ತೆರಳಿ ಚಿಕಿತ್ಸೆ ನೀಡಲು ಸಹಕಾರಿಯಾಗಲಿದೆ ಎಂದರು.